## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಜಿಎಂ/1638/2020/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು
ದಿನಾಂಕ: 26.04.2021.

### ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: ಶ್ರೀ. ಬಿ.ಐ. ಹಾದಿಮನಿ, ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ, ಬೆಳಗಾವಿ ಜಿಲ್ಲೆ ಇವರು ಸರ್ಕಾರಿ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

1. ಶ್ರೀ ಅಮೀರ್ ಖಾನ್ ಜಿ. ಕುಶಾಲ ನಗರ, ಕೆ.ಜಿ.ಹಳ್ಳಿ, ಬೆಂಗಳೂರು (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ. ಬಿ.ಐ. ಹಾದಿಮನಿ, ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ, ಬೆಳಗಾವಿ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿರುತ್ತಾರೆ.

2. **ದೂರಿನ ಸಾರಾಂಶ**:- ಸದರಿ ಪ್ರಕರಣದಲ್ಲಿ ಫಿರ್ಯಾದಿದಾರರು ದಿ. 19.3.2020ರಂದು ಈ ಸಂಸ್ಥೆಗೆ ದೂರನ್ನು ನೀಡಿ ಎದುರುದಾರರು ಬೆಳಗಾವಿ ಜಿಲ್ಲೆಯ ಜಿಲ್ಲಾ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮದ ಜಿಲ್ಲಾವ್ಯವಸ್ಥಾಪಕರಾಗಿ ಕೆಲಸ ನಿರ್ವಹಿಸಿದ್ದು, 2011-12 ನೇ ಸಾಲಿನಲ್ಲಿ ಅಲ್ಪಸಂಖ್ಯಾತರಿಗೆ ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ ಕೊಳವೆ ಬಾವಿ ಮಂಜೂರು ಮಾಡಿದ್ದು, ಎದುರುದಾರರು ಒಂದೇ ಕುಟುಂಬದ ಇಬ್ಬರು ವ್ಯಕ್ತಿಗಳಿಗೆ ಪ್ರತ್ಯೇಕ ಪ್ರತ್ಯೇಕ ಕೊಳವೆ ಬಾವಿ ಮಂಜೂರು ಮಾಡಿದ್ದು, ಸರ್ಕಾರದ ಗಂಗಾಕಲ್ಯಾಣ ಯೋಜನೆಯನ್ವಯ ಒಂದು ಕುಟುಂಬಕ್ಕೆ ಒಂದು ಕೊಳವೆ ಬಾವಿ ಎಂದು

ಆದೇಶವಿದ್ದರೂ ಸಹಾ ಎದುರುದಾರರು ಒಂದೇ ಕುಟುಂಬಕ್ಕೆ 2 ಕೊಳವೆ ಬಾವಿಯನ್ನು ಅಂದರೆ ಗಂಡನಿಗೆ ಒಂದು, ಹೆಂಡತಿಗೆ ಒಂದು, ಕೊಳವೆ ಬಾವಿಯಂತೆ ಮಂಜೂರು ಮಾಡಿ ಸರ್ಕಾರದ ಅನುಷ್ಠಾನಗಳನ್ನು ವ್ಯರ್ಥಗೊಳಿಸಿ, ಸರ್ಕಾರಕ್ಕೆ ಹಾನಿ ಉಂಟು ಮಾಡಿ ಅಧಿಕಾರದ ದುರುಪಯೋಗ ಪಡಿಸಿಕೊಂಡಿರುತ್ತಾರೆಂದು ದೂರು ಅರ್ಜಿಯನ್ನು ಎದುರುದಾರನ ವಿರುದ್ಧ ಸಲ್ಲಿಸಿರುತ್ತಾರೆ.

3. **ಎದುರುದಾರರು ತನ್ನ ಆಕ್ಷೇಪಣೆಯಲ್ಲಿ,** ತಾನು ಜಿಲ್ಲಾ ವ್ಯವಸ್ಥಾಪಕರಾಗಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿನಿಗಮ ಬೆಳಗಾವಿಯಲ್ಲಿ ಕರ್ತವ್ಯ ನಿರ್ವಹಿಸಿದ್ದು, ಹಾಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಖಾನಾಪುರದಲ್ಲಿ ವಿಸ್ತೀರ್ಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತಿರುವುದಾಗಿ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿನಿಗಮದಿಂದ ಹಲವಾರು ಯೋಜನೆಗಳನ್ನು ಅನುಷ್ಟಾನ ಗೊಳಿಸಲಾಗುತ್ತಿದ್ದು, ಅವುಗಳಲ್ಲಿ ಗಂಗಾ ಕಲ್ಯಾಣ ಯೋಜನೆ, ವೈಯಕ್ತಿಕ ಕೊಳವೆಬಾವಿ, ಸಾಮೂಹಿಕ ಕೊಳವೆಬಾವಿ ಹಾಗೂ ಸಾಮೂಹಿಕ ಏತ ನೀರಾವರಿ ಯೋಜನೆ ಇರುತ್ತದೆ. ಈ ಯೋಜನೆಗಳ ಫಲಾನುಭವಿಗಳ ಆಯ್ಕೆಗೆ ವಿಧಾನ ಸಭಾ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿ ಸರ್ಕಾರಿ ನೌಕರರನ್ನು ಸೇರಿಸಿ ಸಮಿತಿ ರಚಿಸಲಾಗಿದೆ. ಈ ಕಛೇರಿಯಲ್ಲಿ ಸ್ವೀಕೃತವಾದ ವಿವಿಧ ಯೋಜನೆಗಳ ಪ್ರತಿಫಲವನ್ನು ಬಯಸಿ ಕಛೇರಿಯಲ್ಲಿ ಸ್ವೀಕೃತವಾದ ಅರ್ಜಿಗಳನ್ನು ಸಮಿತಿಯ ಮುಂದೆ ಮಂಡಿಸಿ, ಈ ಸಮಿತಿಯು ಅರ್ಹ ಫಲಾನುಭವಿಗಳನ್ನು ಗುರ್ತಿಸಿ ಆಯ್ಕೆ ಮಾಡುತ್ತದೆ.

4. ಈ ಮೇಲ್ಕಂಡ ಸೌಲಭ್ಯವನ್ನು ಪಡೆಯಲು, ಫಲಾನುಭವಿಗಳು ಕನಿಷ್ಟ 2 ಎಕರೆ ಹಾಗೂ ಗರಿಷ್ಟ 5 ಎಕರೆ ಒಣ ಬೇಸಾಯ ಹೊಂದಿದ ಸಣ್ಣ ಮತ್ತು ಅತೀ

ಸಣ್ಣ ಜಮೀನು ಖಾತೆ ಹೊಂದಿರುವುದು ಕನಿಷ್ಟ 3 ರಿಂದ 7 ಜನರ ವರೆಗೆ ಹಾಗೂ ಅದಕ್ಕಿಂತ ಹೆಚ್ಚಿನ ಜನರನ್ನು ಸೇರಿಸಿಕೊಂಡು ಸಾಮೂಹಿಕ ನೀರಾವರಿ ಯೋಜನೆ ಸೌಲಭ್ಯ ಪಡೆಯಲು ಅವಕಾಶವಿರುವುದರಿಂದ, ತಾಲೂಕು ಆಯ್ಕೆ ಸಮಿತಿ, ಫಲಾನುಭವಿಗಳನ್ನು ಆಯ್ಕೆ ಮಾಡಿದ ನಂತರ ಪ್ರಸ್ತಾವನೆ ಹಾಗೂ ಅಗತ್ಯ ದಾಖಲೆಗಳನ್ನು ಮಂಜೂರಾತಿಗಾಗಿ ನಿರ್ದೇಶಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿನಿಗಮ, ಬೆಂಗಳೂರು ಇವರಿಗೆ ಸಲ್ಲಿಸಿ ಅನುಮತಿ ಪಡೆದುಕೊಂಡ ನಂತರ ಕಾಮಗಾರಿ ಕೆಲಸವನ್ನು ಜಿಲ್ಲಾ ಪಂಚಾಯಿತ್ ಇಂಜಿನಿಯರಿಂಗ್ ಇಲಾಖೆಯಿಂದ ಕೈಗೊಳ್ಳಲು ಆದೇಶ ನೀಡಲಾಗುವುದು

5. ದಿ: 23/12/2020 ರಂದು ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ) ಬೆಳಗಾವಿ ಇವರು ಗಂಗಾ ಕಲ್ಯಾಣ ಏತ ನೀರಾವರಿ ಯೋಜನೆ ಅಡಿಯಲ್ಲಿ 3 ಕುಟುಂಬದ 6 ಜನರಿಗೆ ಮಾನ್ಯ ಶಾಸಕರು ಆಯ್ಕೆ ಮಾಡಿದ ಪಟ್ಟಿ, ಪ್ರಸ್ತಾವನೆ ಹಾಗೂ ಕೇಂದ್ರ ಕಛೇರಿಯಿಂದ ಮಂಜೂರಾದ ಆದೇಶದ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸಿದ್ದು ಈ ದಾಖಲೆಗಳನ್ನು ಪರಿಶೀಲಿಸಲಾಗಿ 3 ಕುಟುಂಬಗಳಿಗೆ ಅಂದರೆ (1) ಸಾಬಪ್ಪ ಹಸನ್ ಸಾಬ್ ಶ್ಯಾನಿ ದಿವಾನಿ, (2) ಅಲ್ಲಮ್ಮ ಕೋಂ ಸಾಬಪ್ಪ ಶ್ಯಾನಿ ದಿವಾನಿ, (3) ಸುರೇಶ್ ಅಣ್ಣಪ್ಪ ದರೂರ ಅಲಿಯಾಸ್ ಎಳಗೌಡ (4) ಶ್ರೀಮತಿ ವಿಜಯಮಾಲ ಸುರೇಶ್ ದರೂರ ಊರ್ಫ್ ಯಳಗೌಡ, (5) ಲಕ್ಷ್ಮಣ ಭೀಮಪ್ಪ ಉಗಾರ, (6) ಪುಷ್ಪ ಲಕ್ಷ್ಮಣ ಉಗಾರ ಇವರುಗಳಿಗೆ ಮಂಜೂರು ಮಾಡಿರುವುದು ಕಂಡುಬರುತ್ತದೆ

6. **ತನಿಖಾ ಸಮಯದಲ್ಲಿ, ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಬೆಳಗಾವಿ** ರವರು ದಿ: 19/03/2021 ರಂದು ಪತ್ರವನ್ನು

ಸಲ್ಲಿಸಿದ್ದು, ಗಂಗಾ ಕಲ್ಯಾಣ ಏತನೀರಾವರಿ ಯೋಜನೆ ಸೌಲಭ್ಯ ಒದಗಿಸಲು ಆಯ್ಕೆ ಸಂಬಂಧ ಇರುವ ಷರತ್ತುಗಳ ದಾಖಲೆಯನ್ನು ಪೂರೈಸಿದ್ದನ್ನು ಪರಿಶೀಲಿಸಲಾಗಿ ದಿ: 11/12/1997 ರ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಬೆಂಗಳೂರು ಇವರು ಹೊರಡಿಸಿರುವ ಸುತ್ತೋಲೆ ಅನ್ವಯ ಯೋಜನೆಯ ಅನುಷ್ಟಾನದ ಸಂಬಂಧ ಸೌಲಭ್ಯ ಪಡೆಯಲು ಬಯಸುವ ಫಲನುಭವಿಯು ಹೊಂದಿರತಕ್ಕ ಅರ್ಹತೆಯನ್ನು ನಮೂದಿಸಲಾಗಿದ್ದು, ಕ್ರಮ ಸಂಖ್ಯೆ:7 ರಲ್ಲಿ ಒಂದೇ ಕುಟುಂಬಕ್ಕೆ ಸೇರಿದವರು ತಂದೆ, ತಾಯಿ, ಮಗ, ಅಣ್ಣ, ತಮ್ಮ, ಹಾಗೂ ಹೆಂಡತಿ ಇತ್ಯಾದಿ ಹೆಸರಿನಲ್ಲಿ ಈ ಯೋಜನೆ ಅಡಿಯಲ್ಲಿ ಸೌಲಭ್ಯ ಪಡೆಯಲು ಅರ್ಜಿ ಸಲ್ಲಿಸಿದ್ದರೆ ಯೋಜನೆಯ ಅನುಷ್ಟಾನಕ್ಕೆ ಮೊದಲು ಪಾಲು ವಿಭಾಗವಾಗಿದ್ದರೆ ಮಾತ್ರ ಪರಿಗಣಿಸಬಹುದು ಇಲ್ಲದಿದ್ದರೆ ಯಾವುದೇ ಕಾರಣದಿಂದ ಒಂದೇ ಕುಟುಂಬಕ್ಕೆ ಸೇರಿದ ಗಂಡ, ಹೆಂಡತಿ, ತಂದೆ, ತಾಯಿ, ಅಣ್ಣ, ತಮ್ಮ ಹಾಗೂ ಮಗನ ಹೆಸರಿನಲ್ಲಿ ಎಲ್ಲರಿಗೂ ಈ ಯೋಜನೆ ಅಡಿಯಲ್ಲಿ ಸೌಲಭ್ಯ ಪಡೆಯಲು ಅವಕಾಶ ನೀಡುವುದಿಲ್ಲವೆಂದು ಷರತ್ತನ್ನು ವಿಧಿಸಲಾಗಿರುತ್ತದೆ.

7. ದೂರುದಾರರು ಸಲ್ಲಿಸಿರುವ ಪ್ರಕರಣದಲ್ಲಿ ಈ ಕೆಳಕಂಡಂತೆ 3 ಕುಟುಂಬಗಳಿಗೆ ಎರೆಡರಡು ಕೊಳವೆಬಾವಿ ಮಂಜೂರು ಮಾಡಿರುವುದು ಕಂಡುಬರುತ್ತದೆ.

(ಎ) ಸಾಬಪ್ಪ ಹಸನ್ ಸಾಬ್ ಷಾನಿ ದಿವಾನಿ ಹಾಗೂ ಹೆಂಡತಿಯಾದ ಅಲ್ಲಮ್ಮ ಕೋಂ ಸಾಬಪ್ಪ ಷಾನಿ ದಿವಾನಿ,

(ಬಿ) ಸುರೇಶ್ ಅಣ್ಣಪ್ಪ ದರೂರು ಅಲಿಯಾಸ್ ಯಳಗೌಡ ಹಾಗೂ ಹೆಂಡತಿಯಾದ ಶ್ರೀಮತಿ ವಿಜಯಮಾಲ ಸುರೇಶ್ ದರೂರು ಉರ್ಫ್ ಯಳಗೌಡ

(ಸಿ) ಲಕ್ಷ್ಮಣ್ ಭೀಮಪ್ಪ ಹೂಗಾರ್ ಹೆಂಡತಿಯಾದ ಪುಷ್ಪ ಲಕ್ಷ್ಮಣ್ ಹೂಗಾರ್

ಇವರುಗಳಿಗೆ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಗಂಡ ಹೆಂಡತಿ ಹೆಸರಿಗೆ ಪ್ರತ್ಯೇಕ ಕೊಳವೆ ಬಾವಿ/ಏತ ನೀರಾವರಿ ಯೋಜನೆಯಡಿಯಲ್ಲಿ ಮಂಜೂರು ಮಾಡಿ ಸರ್ಕಾರವು ನಿಗದಿಪಡಿಸಿರುವ ಮಾನದಂಡಗಳನ್ನು ಉಲ್ಲಂಘಿಸಿರುವುದು ಸಾಬೀತಾಗುತ್ತದೆ.

8. ಎದುರುದಾರರು 3 ಕುಟುಂಬಗಳ, ಗಂಡ, ಹೆಂಡತಿ ಇವರಿಗೆ ಪ್ರತ್ಯೇಕ ಕೊಳವೆಬಾವಿ/ಏತನೀರಾವರಿ ಯೋಜನೆ ಅಡಿಯಲ್ಲಿ ಸಮಿತಿಯ ಮುಂದೆ ಮಂಜೂರಾತಿಗಾಗಿ ಮಂಡಿಸುವ ಸಂದರ್ಭದಲ್ಲಿ ಸರ್ಕಾರದ ಸುತ್ತೋಲೆಯ ನಿಯಮಗಳನ್ನು ಉಲ್ಲೇಖಿಸದೇ ಹೋಗಿರುವುದು ಕಂಡುಬರುತ್ತದೆ.

9. ಅಧ್ಯಕ್ಷರ ನೇತೃತ್ವದಲ್ಲಿ ನಡೆದ ಸಭೆ ದಿ: 23/09/2014 ರಂದು ಆಯ್ಕೆ ಮಾಡಲಾದ ಫಲಾನುಭವಿಗಳ ಪಟ್ಟಿಯನ್ನು ಮೇಲಾಧಿಕಾರಿಗಳಿಗೆ ಪ್ರಸ್ತಾವನೆಗೆ ಕಳುಹಿಸುವಾಗ ಒಂದೇ ಕುಟುಂಬದ ಇಬ್ಬರು ಸದಸ್ಯರನ್ನು ಆಯ್ಕೆ ಮಾಡಿದ ಕುರಿತು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು ರವರಿಗೆ ಷರಾದೊಂದಿಗೆ ಸಲ್ಲಿಸದೇ ಹೋಗಿರುವುದನ್ನು ಗಮನಿಸಿದಲ್ಲಿ ಹಾಗೂ ದಿ: 11/12/1997 ರಂದು ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಬೆಂಗಳೂರು ರವರ ಸುತ್ತೋಲೆಯನ್ನು ಉಲ್ಲಂಘಿಸಿ ಶಿಫಾರಸ್ಸು ಮಾಡಿರುವುದು, ಎದುರುದಾರನು ತನ್ನ ಕರ್ತವ್ಯದಲ್ಲಿ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದ್ದರಿಂದ ಎದುರುದಾರನು ಸಲ್ಲಿಸಿರುವ ಆಕ್ಷೇಪಣೆಯನ್ನು ಒಪ್ಪಲು ಬರುವುದಿಲ್ಲವಾದ್ದರಿಂದ ಎದುರುದಾರನ ವಿರುದ್ಧ ಕ್ರಮ ಜರುಗಿಸಬಹುದಾಗಿರುತ್ತದೆ.

10. ಮೇಲೆ ಚರ್ಚಿಸಲಾದ ಕಾರಣಗಳ ಹಿನ್ನಲೆಯಲ್ಲಿ ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1) (i) ರಿಂದ (iii) ರನ್ವಯ ಎದುರುದಾರರಾದ ಶ್ರೀ. ಬಿ.ಐ. ಹಾದಿಮನಿ, ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ, ಬೆಳಗಾವಿ ಜಿಲ್ಲೆ ರವರು ಮೇಲ್ನೋಟಕ್ಕೆ ದುರ್ನಡತೆಯನ್ನೆಸಗಿರುವುದು ಕಂಡುಬಂದಿದ್ದು ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

11. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ, ಸಕ್ಷಮ ಪ್ರಾಧಿಕಾರವು ಈ ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿದೆ.

26/4

**[ನ್ಯಾಯಮೂರ್ತಿ ಬಿ.ಎಸ್.ಪಾಟೀಲ್]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**